ಓ ಎಸ್ ನಂ. 1/2016
ಡಿ ಡಬ್ಲು 1
ದಿನಾಂಕ 21-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ ಬಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ವಿಚಾರಗಳು ಸತ್ಯವಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಣ ಪತ್ರದ ವಿಚಾರಗಳನ್ನು ಯಾರು ಹೇಳಿ ಬರೆಸಿದ್ದು ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ವಾದಿ ಪ್ರಸ್ತುತ ದಾವೆಯನ್ನು ಯಾವ ವಿಚಾರಕ್ಕೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ವಿಭಾಗಕ್ಕಾಗಿ ಎಂದು ನುಡಿಯುತ್ತಾರೆ. ಎಲ್ಲಾ ಸ್ವತ್ತುಗಳ ಮೇಲೆ ವಿಭಾಗಕ್ಕಾಗಿ ವಾದಿ ದಾವೆ ಹೂಡಿರುತ್ತಾರೆ. ನಿಡಿ-1ರ ವಂಶವೃಕ್ಷದಂತೆ ಕುಟುಂಬದ ಮೂಲಪುರುಷ ಗೋವಿಂದಪ್ಪ ನನಗೆ ಅಜ್ಜನಾಗಬೇಕು. ಸದರಿ ಗೋವಿಂದಪ್ಪರವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಲಕ್ಷ್ಮಮ್ಮ ಮತ್ತು ಎರಡನೇ ಹೆಂಡತಿ ಕೊಂತಮ್ಮ. ಸದರಿ ಲಕ್ಷ್ಮಮ್ಮರವರ ಮೊದಲನೇ ಮಗ ಹನುಮಂತಪ್ಪರವರ ಎರಡನೇ ಮಗನಾದ ಗೋವಿಂದಪ್ಪ ಈ ದಾವೆಯ ವಾದಿ ಎಂದರೆ ಸರಿ. ಮೂಲಪುರುಷ ಗೋವಿಂದಪ್ಪರವರ ಎರಡನೇ ಹೆಂಡತಿ ಕೊಂತಮ್ಮರವರ ಮೊದಲನೇ ಮಗ ತಿಮ್ಮಪ್ಪರವರ ಮಕ್ಕಳಲ್ಲಿ ನಾಲ್ಕನೇಯವನು ಎಂದರೆ ಸರಿ. ದಾವಾ ಆಸ್ತಿಗಳೆಲ್ಲವೂ

ಮೊದಲು ಮೂಲಪುರಷ ಗೋವಿಂದಪ್ಪರವರ ಹೆಸರಿನಲಿದ್ದವು ಎಂದರೆ ಸಾಕ್ಷಿ ಸದರಿ ಮೂಲಪುರುಷ ಗೋವಿಂದಪ್ಪರವರ ಹೆಸರಿನಲ್ಲಿ ಇರಲಿಲ್ಲ ಅವರ ತಂದೆ ಕರಿಯ ಬಿನ್ ದಮ್ಮಿಡರವರ ಹೆಸರಿನಲ್ಲಿದ್ದವು ಎಂದು ನುಡಿಯುತ್ತಾರೆ. ಮೂಲಪುರುಷ ಗೋವಿಂದಪ್ಪ ಎಷ್ಟನೇ ಸಾಲಿನಲ್ಲಿ ಮೃತ ಪಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಮೂಲಪುರುಷ ಗೋವಿಂದಪ್ಪರವರು ಮರಣ ಹೊಂದಿದ ನಂತರ 2013-14 ರಲ್ಲಿ ಅವರ ಎರಡನೇ ಹೆಂಡತಿ ಕೊಂತಮ್ಮರವರ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ಪೌತಿ ಖಾತೆಯಂತೆ ಬದಲಾಗಿರುವ ವಿಚಾರ ನನಗೆ ಗೊತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೂಲಪುರುಷ ಗೋವಿಂದಪ್ಪರವರು ಮರಣ ಹೊಂದಿದ ನಂತರ ಅವರ ಇಬ್ಬರು ಹೆಂಡತಿಯರ ಹೆಸರಿನಲ್ಲಿ ಜಂಟಿ ಖಾತೆ ಮಾಡಿಸುವ ಬದಲಾಗಿ ವಾದಿಯ ಹಿಸ್ಸೆಯ ಹಕ್ಕನ್ನು ಲಪಟಾಯಿಸುವ ಸಲುವಾಗಿ ಕೇವಲ ಕೊಂತಮ್ಮರವರ ಹೆಸರಿನಲ್ಲಿ ಖಾತೆ ಮಾಡಿಸಲಾಗಿರುತ್ತದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಲಕ್ಷ್ಮಮ್ಮರವರು ಮರಣ ಹೊಂದಿದ್ದು, ಕೊಂತಮ್ಮರವರಿಗೆ ಮಾತ್ರ ಹಕ್ಕು ಬರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ಇಂದಿಗೂ ಸಹ ಒಟ್ಟು ಕುಟುಂಬದಲ್ಲಿದ್ದು ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ

ಜಮೀನುಗಳು ಮಾತ್ರ ವಿಭಾಗವಾಗಿಲ್ಲ ಮನೆಗಳು ಮತ್ತು ನಿವೇಶನಗಳು ವಿಭಾಗವಾಗಿದ್ದು ಅವರವರ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3 ರ ಸರ್ವೆ ನಂ.69/1 ರ 7 ಎಕರೆ 20 ಗುಂಟೆ ಜಮೀನಿನ ಖಾತೆ ಇಂದಿಗೂ ಸಹ ಕೊಂತಮ್ಮ ಕೋಂ ಗೋವಿಂದಪ್ಪರವರ ಹೆಸರಿನಲ್ಲಿ ಮುಂದುವರೆಯುತ್ತಿದ್ದು ಅದರಲ್ಲಿ ಯಾವುದೇ ವಿಭಾಗವಾಗಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿಯಲ್ಲಿ ವಿಭಾಗವಾಗಿದ್ದು ಕೊಂತಮ್ಮರವರ ಮಗನಾದ ಗೋವಿಂದಪ್ಪರವರು ಸದರಿ ಸರ್ವೆ ನಂಬರಿನ 2 ಎಕರೆಯಲ್ಲಿ ಸ್ವಾಧೀನದಲ್ಲಿದ್ದು, ನಾನು 2 ಎಕರೆಯಲ್ಲಿ ಸ್ವಾಧೀನದಲ್ಲಿದ್ದು, ಉಳಿದ ಮೂರೂವರೆ ಎಕರೆ ಜಮೀನಿನಲ್ಲಿ ವಾದಿ ಗೋವಿಂದಪ್ಪರವರು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಮೂಲಪುರುಷ ಗೋವಿಂದಪ್ಪರವರು ಮರಣ ಹೊಂದಿದ ಲಗಾಯತ್ತು ಸದರಿ ದಾವಾ ಐಟಂ ನಂ.3 ರ ಸ್ವತ್ತಿನಲ್ಲಿ ಪ್ರತಿವಾದಿಗಳಾದ ನಾವುಗಳು ಸ್ವಾಧೀನದಲ್ಲಿದ್ದು ಅದರಲ್ಲಿ ವಾದಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 55-60 ವರ್ಷಗಳ ಹಿಂದೆಯೇ ವಿಭಾಗವಾಗಿದ್ದು ಸದರಿ ಆಸ್ತಿಯಲ್ಲಿ ಅವರವರ ಹಿಸ್ಸೆಯಲ್ಲಿ ಅವರವರೇ ಸ್ವಾಧೀನ ಇದ್ದಾರೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.3 ರ ಸರ್ವೆ ನಂ.69/1 ರ 7 ಎಕರೆ 20 ಗುಂಟೆ ಜಮೀನಿನ ಪೈಕಿ ವಾದಿಗೆ 3 ಎಕರೆ 20 ಗುಂಟೆ ಜಮೀನು ಕೊಟ್ಟಿರುವುದಾಗಿ ನಾನು ಸಾಕ್ಷ್ಯ ನುಡಿದಿದ್ದು, ಯಾವ ರೀತಿ ಕೊಡಲಾಗಿದೆ ಎಂದರೆ ಸಾಕ್ಷಿ 55-60 ವರ್ಷಗಳ ಹಿಂದೆ ಹಿರಿಯರು ಅಳತೆ ಮಾಡಿ ಹಂಚಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ವಾದಿಗೆ 3 ಎಕರೆ 20 ಗುಂಟೆ ಜಮೀನು ಕೊಟ್ಟಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನಾನು ಹಾಜರಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.3 ರಲ್ಲಿ ವಾದಿಗೆ ಯಾವುದೇ ಹಿಸ್ಸೆಯನ್ನು ನೀಡದೆ ಇದ್ದರೂ ಅವರಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರ ಆಸ್ತಿಯಲ್ಲಿ ವಾರ್ಷಿಕವಾಗಿ ಸುಮಾರು 4-5 ಲಕ್ಷ ಆದಾಯ ಬರುತ್ತಿರುವ ಕಾರಣ ಆ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ದಾವಾ ಐಟಂ ನಂ.3 ರ ಆಸ್ತಿಯ ಮೇಲೆ ಸಾಲ ಪಡೆಯಲು ದಾವೆ ಹೂಡುವ ಪೂರ್ವದಲ್ಲಿ ಬೀರೂರಿನ ಎಸ್ ಬಿ ಐ ಬ್ಯಾಂಕಿನಲ್ಲಿ ಪ್ರಯತ್ನ ಪಟ್ಟಿದೆ ಎಂದರೆ ಸುಳ್ಳು. ಆ ರೀತಿನ ನಾನು ಸುಮಾರು 25 ಲಕ್ಷ ರೂ ಸಾಲ ಪಡೆಯಲು ಹೋದಾಗ ವಾದಿ ವಕೀಲರ ಮೂಲಕ ಬ್ಯಾಂಕಿಗೆ

ನೋಟಿಸನ್ನು ಜಾರಿ ಮಾಡಿ ಸಾಲ ನೀಡದಂತೆ ತಿಳುವಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಯಾವುದೇ ರೀತಿಯ ನೋಟೀಸು ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ವಾದಿಗೆ ಮೋಸ ಮಾಡಿ ಸದರಿ ಆಸ್ತಿಯನ್ನು ಅಡಮಾನ ಮಾಡಿ ಸಾಲ ಪಡೆಯಲು ನಾನು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ರ ಸರ್ವೆ ನಂ.162/2 ರ 2 ಎಕರೆ 28 ಗುಂಟೆ ಜಮೀನಿನಲ್ಲಿ ನಾನು ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು ಮನೆ ಕಟ್ಟಿರುತ್ತೇನೆ ವಾದಿ ಸಹ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಾದಿ 1 ಎಕರೆ ಮತ್ತು ನಾನು 1 ಎಕರೆ 28 ಗುಂಟೆಯಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ವಾದಿಗೆ ಯಾವುದೇ ಹಿಸ್ಸೆ ಬಂದಿಲ್ಲ ಮತ್ತು ಅವರ ಮನೆಯನ್ನು ಕಟ್ಟದೆ ಇದ್ದರೂ ಸಹ ಸದರಿ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಯಾವುದೇ ಹಿಸ್ಸೆಯನ್ನು ನೀಡದೆ ಸದರಿ ಆಸ್ತಿಗಳನ್ನು ಲಪಟಾಯಿಸು ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-11 ರ ದಾಖಲೆಯಲ್ಲಿರುವ ಆಸ್ತಿಯಲ್ಲಿ ನಾನು ಮಾತ್ರ ಸ್ವಾಧೀನ ಹೊಂದಿದ್ದು, ವಾದಿ ಯಾವುದೇ ಸ್ವಾಧೀನ ಹೊಂದಿಲ್ಲ

ಎಂದರೆ ಸಾಕ್ಷಿ ನಾನು ಮತ್ತು ವಾದಿ ಇಬ್ಬರು ಸಹ ಸಮಭಾಗದಲ್ಲಿ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಾನು ಸ್ವಾಧೀನದಲ್ಲಿರುವ ಅಳತೆ 32 x 46 ಅಡಿ ಆಗಿರುತ್ತದೆ. ವಾದಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳಲಾದ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 32 x 46 ಅಡಿ ಎಂದು ನುಡಿಯುತ್ತಾರೆ. ನಾನು ಸ್ವಾಧೀನ ಇರುವ 32 x 46 ಅಡಿ ಜಾಗದ ಪೂರ್ವ ದಿಕ್ಕಿಗೆ ಯಾರು ಬರುತ್ತಾರೆ ಎಂದರೆ ಸಾಕ್ಷಿ ವಾದಿ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಬೀರೂರಿನ ರಸ್ತೆ ಬರುತ್ತದೆ. ಸದರಿ ಸೈಟಿನಲ್ಲಿ ವಾದಿಗೆ ಯಾವುದೇ ಭಾಗ ನೀಡದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-12 ರ ದಾಖಲೆಯಲ್ಲಿ ನಮೂದಿರುವ ನಾಡಹೆಂಚಿನ ಮನೆಯಲ್ಲಿ ನಾನು ಮಾತ್ರ ಸ್ವಾಧೀನ ಇದ್ದು, ವಾದಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಇಬ್ಬರು ಸಹ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ವಾದಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ 20 x 30 ಅಡಿ ಎಂದು ನುಡಿಯುತ್ತಾರೆ. ನಾನು ಎಷ್ಟು ಅಡಿ ವಿಸ್ತೀರ್ಣದಲ್ಲಿ ಸ್ವಾಧೀನ ಇದ್ದೇನೆ ಎಂದರೆ ಸಾಕ್ಷಿ 20 x 30 ಅಡಿ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ನಾನು ಮಾತ್ರ ಸ್ವಾಧೀನ ಇದ್ದರೂ ಸಹ ವಾದಿ ಸಹ ಇದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಿಸ್ಸೆ ನೀಡದೆ ಇದ್ದರೂ ಹಾಗೂ ಸದರಿ ಆಸ್ತಿಗಳಲ್ಲಿ ನಾವೇ ಸ್ವಾಧೀನವನ್ನು ಮುಂದುವರೆಸಿಕೊಂಡು ಬರುತ್ತಿದ್ದರೂ ಸಹ ವಾದಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-13 ರ ದಾಖಲೆಯಲ್ಲಿ ನಮೂದಿರುವ ನಾಡ ಹೆಂಚಿನ ಮನೆಯಲ್ಲೂ ಸಹ ನಾನೇ ಸ್ವಾಧೀನ ಇದ್ದು, ವಾದಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 60 ವರ್ಷಗಳಿಂದಲೂ ವಾದಿ ಮತ್ತು ನಾನು ಎರಡು ಭಾಗ ಮಾಡಿಕೊಂಡು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ವಾದಿ ದಾವೆ ಹೂಡುವ ಪೂರ್ವದಲ್ಲಿ ಒಟ್ಟು ಕುಟುಂಬದ ಜಮೀನುಗಳಲ್ಲಿ, ಮನೆಗಳಲ್ಲಿ ಮತ್ತು ಸೈಟಿನಲ್ಲಿ ಪಾಲುಕೊಡಬೇಕೆಂದು ನನ್ನನ್ನು ಕೇಳಿದಾಗ ನಾನು ಅವರನ್ನು ನಿಂಧಿಸಿ ಬೈದಿರುತ್ತೇನೆ ಎಂದರೆ ಸುಳ್ಳು. ವಾದಿಗೆ ಇಬ್ಬರು ಹೆಣ್ಣು ಮಕ್ಕಳು ಇರುವ ಕಾರಣದಿಂದ ಅವರಿಗೆ ಒಟ್ಟು ಕುಟುಂಬದ ಆಸ್ತಿಗಳು ಹೋಗಬಾರದೆಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ನ್ಯಾಯಾಲಯದಲ್ಲಿ ಈ ದಾವೆಯನ್ನು ಮುಂದುವರೆಸುವುದು ಕಷ್ಟವಾಗುತ್ತದೆ ಎಂದು ಹೇಳಿ ವಾದಿಗೆ ಓ ಎಸ್ ನಂ.159/2025 ರ

ದಾವೆಯನ್ನು ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಹೂಡುವಂತೆ ಪ್ರಚೋದಿಸಿರುತ್ತೇನೆ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.